ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 4, Jan-Feb, 2023, Pp. 11-18.**
**©*IIMRD*, Mysuru**
IIMRD JOURNALS
**www.iimrd.com**

# ಕನ್ನಡ ರಾಜಕೀಯ ಕಾದಂಬರಿಗಳಲ್ಲಿ ಗಾಂಧೀವಾದದ ಚಿಂತನೆಗಳು

**ಡಾ.ಮೂಡಲಗಿರಿಯಯ್ಯ***

*ಕನ್ನಡ ಪ್ರಾಧ್ಯಾಪಕರು, ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು, ಚಿಕ್ಕಮಗಳೂರು.

***ಸಾರಾಂಶ:(Abstract)***

*ಭಾರತದ ಇತಿಹಾಸದಲ್ಲೆ ಈ ಶತಮಾನ ಮಹತ್ವಪೂರ್ಣವಾದುದು. ಹಲವು ವರ್ಷಗಳ ಕಾಲ ಸಾಮ್ರಾಜ್ಯಶಾಹಿ ಪ್ರಭುತ್ವದ ಆಡಳಿತದಲ್ಲಿದ್ದ ಭಾರತ, ಸ್ವಾತಂತ್ರ್ಯ ಹೋರಾಟದ ಮೂಲಕ ರಾಜಕೀಯ ಪ್ರಭುತ್ವವನ್ನು ಪಡೆದುಕೊಂಡಿತು. ಪ್ರಜಾಸತ್ತಾತ್ಮಕ ರಾಷ್ಟ್ರವನ್ನಾಗಿ ಪಡೆಯಲು ಮಹಾತ್ಮ ಗಾಂಧಿಯಂಥ ಸಮರ್ಥ ನಾಯಕರು ತಮ್ಮ ತತ್ವ ಸಿದ್ಧಾಂತಗಳ ಮೂಲಕ ಹೋರಾಟ ಮಾಡಿ ಸ್ವಾತಂತ್ರ್ಯ ಪಡೆದುಕೊಂಡಿದ್ದು, ಈ ದೇಶದ ಚರಿತ್ರೆಯ ದೃಷ್ಟಿಯಿಂದ ಮಹತ್ವವಾದುದು. ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ಚಳುವಳಿಗಳು ಸಹ ಚಾರಿತ್ರಿಕ ಮಹತ್ವ ಪಡೆದುಕೊಂಡವು. ಗಾಂಧೀವಾದದ ಪರಿಕಲ್ಪನೆ ಬಹುಜನರ ಮೇಲೆ ಪ್ರಭಾವ ಬೀರುವುದರ ಜೊತೆಗೆ ರಾಜಕೀಯ ಪ್ರಜ್ಞೆಯನ್ನುಂಟು ಮಾಡಿತು. ಹಾಗೇಯೇ ಗಾಂಧಿ ಮಾಡಿದ ಆಂದೋಲನವು ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ಕಟ್ಟಿಕೊಡುತ್ತದೆ. ಗಾಂಧೀವಾದದ ಹಿನ್ನೆಲೆಯಲ್ಲಿ ರೂಪುಗೊಂಡ ರಾಜಕೀಯತೆ ಎನ್ನುವ ಪರಿಭಾಷೆ ವಿಶಾಲಾರ್ಥದಲ್ಲಿ ರಾಜಕೀಯದ ನೈತಿಕ ಚುಟುವಟಿಕೆಗಳನ್ನು ಅವಲಂಬಿಸಿದೆ ಅನ್ನುವುದು ಸಹ ಗಮನಾರ್ಹವಾದ ಅಂಶವಾಗಿದೆ. ಚಾರಿತ್ರಿಕ ದೃಷ್ಟಿಕೋನದಿಂದ ಕನ್ನಡ ಕಾದಂಬರಿಗಳನ್ನು ಗಮನಿಸಿದಾಗ ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳಲ್ಲಿ, ಗಾಂಧೀವಾದದ ರಾಜಕೀಯ ಪರಿಕಲ್ಪನೆಯನ್ನೊಳಗೊಂಡ ರಾಜಕೀಯ ಕಾದಂಬರಿಗಳು ರಚಿತಗೊಂಡಿವೆ.*

***ಮುಖ್ಯಪದಗಳು (Keywords)*** *ಕನ್ನಡ ಸಾಹಿತ್ಯ, ಕಾದಾಂಬರಿ, ಗಾಂಧೀವಾದ.*

**ಪೀಠಿಕೆ**

ನಾವು ಸಾಹಿತ್ಯ ಮತ್ತು ರಾಜಕೀಯದ ಬಗ್ಗೆ ಮಾತಾಡುವಾಗ ರಾಜಕೀಯ ವ್ಯವಸ್ಥೆಯ ದೃಷ್ಟಿಯನ್ನು ಹೀಗೆ ಗ್ರಹಿಸಬಹುದು, **"**ಯಾವೋತ್ತು ರಾಜ್ಯ ವ್ಯವಸ್ಥೆ ಸೃಷ್ಟಿಯಾಯಿತೋ; ಅಂದರೆ ಯಾವೋತ್ತು ಸಾಮುದಾಯಿಕ ಬದುಕನ್ನು ಮನುಷ್ಯ ಆರಂಭಿಸಿದನೋ ಆವೋತ್ತಿನಿಂದ ರಾಜಕಾರಣ ಅವರಸಿಕೊಂಡಿದೆ.**"**[1] ಈ ಅಂಶವು ರಾಜಕೀಯ ಪರಿಕಲ್ಪನೆಯಾಗಿ ಸಾಹಿತ್ಯ ಮತ್ತು ಸಮಾಜದಲ್ಲಿ ಒಂದು ಅಸ್ತಿತ್ವವನ್ನು ಪಡೆದುಕೊಂಡಿದೆ. ಚಾರಿತ್ರಿಕ ದೃಷ್ಟಿಕೋನದಿಂದ ಕನ್ನಡ ಕಾದಂಬರಿಗಳನ್ನು ಗಮನಿಸಿದಾಗ ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳಲ್ಲಿ, ಗಾಂಧೀವಾದದ ರಾಜಕೀಯ ಪರಿಕಲ್ಪನೆಯನ್ನೊಳಗೊಂಡ ರಾಜಕೀಯ ಕಾದಂಬರಿಗಳು ರಚಿತಗೊಂಡಿವೆ.

*Please cite this article as:* ಡಾ.ಮೂಡಲಗಿರಿಯಯ್ಯ. (2023). ಕನ್ನಡ ರಾಜಕೀಯ ಕಾದಂಬರಿಗಳಲ್ಲಿ ಗಾಂಧೀವಾದದ ಚಿಂತನೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(4). ಪು.ಸಂ. 11–18.*

ರಾಜಕೀಯ ಕಾದಂಬರಿಗಳು ಮೊದಲು ಆಂಗ್ಲ ಸಾಹಿತ್ಯದಲ್ಲಿ ರಚನೆಗೊಂಡವು. ಆಂಗ್ಲ ಸಾಹಿತ್ಯದ ರಾಜಕೀಯ ಕಾದಂಬರಿಯ ಜನಕನಾದ ಬೆಂಜಮಿನ್ ಡಿಸ್ರೇಲಿ ತನ್ನ ಎರಡನೆ ಕಾದಂಬರಿ 'ಸಿಬೆಲ್' (1835)ನ ಮುನ್ನುಡಿಯಲ್ಲಿ ರಾಜಕೀಯ ಕಾದಂಬರಿಯ ಸ್ವರೂಪ ಮತ್ತು ರಚನಾ ವಿಧಾನವನ್ನು ಚರ್ಚಿಸುತ್ತಾನೆ (ವಿವರಣೆಗೆ ನೋಡಿ: ಸಿ.ಎನ್, ರಾಮಚಂದ್ರ ಸ್ವರೂಪ ಪುಟ 18 ರಿಂದ 25) ರಾಜಕೀಯ ಕಾದಂಬರಿ ಎಂದರೇನು? ಅನ್ನುವುದರ ಬಗ್ಗೆ ಆಂಗ್ಲ ಸಾಹಿತ್ಯದ ಬರಹಗಾರರ ವ್ಯಾಖ್ಯಾನಗಳನ್ನು ಗಮನಿಸಿದಾಗ ಒಂದು ಸ್ಥೂಲವಾದ ಅಭಿಪ್ರಾಯಕ್ಕೆ ಬರಬಹುದು.

ರಾಜಕೀಯ ಕಾದಂಬರಿಯ ಬಗ್ಗೆ ಹರೀಶ್ ತ್ರಿವೇದಿ ಅವರು "The term politics shall refer to power structured relationship arrnagments. Where by one group of persons is controlled by another (ವಿವರಣೆ ನೋಡಿ: Definition of Political Novel, its say that Harish Trivedi, p- 58-62. 'ಅಧಿಕಾರವನ್ನಾದಾರವಾಗುಳ್ಳ ಮಾನವ ಸಂಬಂಧವನ್ನು ಕುರಿತಾದ ಚಿಂತನೆಯು ಪ್ರಧಾನವಾಗಿರುವ ಕೃತಿಯೇ ರಾಜಕೀಯ ಕಾದಂಬರಿ' ಎನ್ನುತ್ತಾರೆ.

ಆಂಗ್ಲ ಸಾಹಿತ್ಯದ ರಾಜಕೀಯ ಕಾದಂಬರಿಯ ಜನಕನಾದ ಬೆಂಜಮಿನ್ ಡಿಸ್ರೆಲ್‌ನ ಪ್ರಕಾರ 'ರಾಜಕೀಯ ಕಾದಂಬರಿಯೆಂದು ಕರೆಯಲ್ಪಡುವ ಕೃತಿಯಲ್ಲಿ ಕೇವಲ ರಾಜಕೀಯದಲ್ಲಿ ತುಂಬಿರುವ ಅ ನೀತಿ, ಭ್ರಷ್ಟಾಚಾರ ಇವುಗಳ ಚಿತ್ರಣವಿದ್ದರೆ ಸಾಲದು. ಅಂತಹ ಕೃತಿಯಲ್ಲಿ ಪ್ರಮುಖ ರಾಜಕೀಯ ವ್ಯವಸ್ಥೆಯನ್ನು ಕುರಿತಾದ ಗಂಭೀರ ಚಿಂತನೆಗಳು ಇರಬೇಕು' ಎನ್ನುತ್ತಾರೆ ತಮ್ಮ 'ರಾಜಕೀಯ ಕಾದಂಬರಿಯ ವ್ಯಾಖ್ಯಾನಗಳು' ಎಂಬ ಗ್ರಂಥದಲ್ಲಿ.

ಮಾರಿಷ್ ಇ. ಸ್ಪಿಯರ್ ತನ್ನ 'Political Novel' ಗ್ರಂಥದಲ್ಲಿ "A work of fiction which learns rather to 'Ideas' than to emotions where the main purpose of the writer is partly propaganda, public reform of exposition of the lives of persongages who maintain government or of the forces which constitute government"[2] ಇವರ ಪ್ರಕಾರ 'ರಾಜಕೀಯ ಕಾದಂಬರಿ ಗದ್ಯದಲ್ಲಿ ಬರೆದ ಕಾಲ್ಪನಿಕ ಕಥೆ, ಅದರಲ್ಲಿ ಭಾವನೆಗಳಿಗಿಂತ ವಿಚಾರಗಳಿಗೆ ಪ್ರಾಧಾನ್ಯತೆ ಕೊಡಬೇಕಾಗುತ್ತದೆ. ರಾಜಕೀಯ ಶಾಸನಗಳ ಬಗ್ಗೆ ತೋರುವ ನಿಷ್ಠತೆ ಹಾಗೂ ಪ್ರಜೆಗಳ ನಡತೆಗಳನ್ನೊಳಗೊಂಡ ಒಂದು ತಾತ್ವಿಕ ನೆಲೆಯಲ್ಲಿ ಚಿತ್ರಿಸುವುದು ರಾಜಕೀಯ ಕಾದಂಬರಿಯಾಗುತ್ತದೆ.' ಎನ್ನುತ್ತಾರೆ.

ಅರ್ವಿಂಗ್ ಹೋವ್ ತಮ್ಮ *'Political Novel'* ಎಂಬ ಗ್ರಂಥದಲ್ಲಿ *"By a political novel I mean a novel in which political ideas play a dominant role or in which a political milieu is the dominant setting…, perhaps it would be better to say; a novel in which we take to be dominant political ideas or the political milieu, a novel whih permits his assumption without there by a suffering any readical distortion and if*

*follows, with the possibility of some analytical profit"*[3]. ಇವರ ಪ್ರಕಾರ 'ರಾಜಕೀಯ ವಿಚಾರಗಳು ಪ್ರಧಾನವಾಗಿರುವ ಅಥವಾ ಒಂದು ರಾಜಕೀಯ ಘಟ್ಟದ ಗಮನಾರ್ಹ ಘಟನೆಗಳ *(Epoch)* ಹಿನ್ನೆಲೆಯಲ್ಲಿ ಪಾರ್ಶ್ವ ಭೂಮಿಕೆಯಾಗಿ ಬರುವ ಒಂದು ಕೃತಿ ರಾಜಕೀಯ ಕಾದಂಬರಿಯಾಗುತ್ತದೆ. ನಾವು ಯಾವ ಕೃತಿಯಲ್ಲಿ ರಾಜಕೀಯ ವಿಚಾರಗಳನ್ನು ಅಥವಾ ರಾಜಕೀಯ ಘಟ್ಟವನ್ನು ಪ್ರಧಾನವಾಗಿ ಪರಿಗಣಿಸುತ್ತೇವೋ ಅದು ರಾಜಕೀಯ ಕಾದಂಬರಿಯಾಗಿರುತ್ತದೆ. ಈ ಪರಿಗಣನೆಯಿಂದ ಆ ಕೃತಿಗೆ ನಷ್ಟವಾಗದಂತಿರಬೇಕು ಅಲ್ಲದೆ ಆ ಕೃತಿಯ ವಿಶ್ಲೇಷಣೆಗೆ ಯೋಗ್ಯವಾಗಿಯೂ ಇರಬೇಕು. ಈ ಎಲ್ಲ ರಾಜಕೀಯ ಕಾದಂಬರಿಗಳ ವ್ಯಾಖ್ಯಾನಗಳು ರಾಜಕೀಯ ವಿಚಾರವನ್ನು ಕುರಿತದ್ದು ಎಂದು ಗುರುತಿಸಿದಾಗ, ರಾಜಕೀಯ (Politic) ಶಬ್ದದ ಅರ್ಥದ ವ್ಯಾಖ್ಯಾನವನ್ನೇ ಎತ್ತುವುದಿಲ್ಲ. ಯಾವುದು ರಾಜಕೀಯ? ಯಾವುದು ಅಲ್ಲ ಅನ್ನುವುದೇ ಗೊಂದಲವಾಗುತ್ತದೆ.

ಆದ್ದರಿಂದ ಕೇಟ್ ಮಿಲೆಟ್ ತನ್ನ *'The Sexual Politics'*- 1970 ಗ್ರಂಥದಲ್ಲಿ ರಾಜಕೀಯ ಶಬ್ದಾರ್ಥವನ್ನು ಹೀಗೆ ವ್ಯಾಖ್ಯಾನಿಸುತ್ತಾಳೆ, 'ಸತ್ತೆಯನ್ನಾಧರಿಸಿದ ಒಂದು ಸಮೂಹವು ಒನ್ನೊಂದು ಸಮೂಹವನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಸ್ಯಾಧ್ಯವಾಗುವಂತಹ ವ್ಯವಸ್ಥೆಯನ್ನು ನಾವು ರಾಜಕೀಯವೆಂದು ಕರೆಯಬಹುದು'[4] ಎನ್ನುತ್ತಾಳೆ. ಆದರೆ ಅಧಿಕಾರ ವ್ಯವಸ್ಥೆಯನ್ನಾಧರಿಸಿದ ಎಲ್ಲ ಸಾರ್ವಜನಿಕ, ವೈಯುಕ್ತಿಕ ಸಂಬಂಧಗಳೂ ರಾಜಕೀಯ ಸಂಬಂಧಗಳೆ ಇಂತಹ ವಿಶಾಲಾರ್ಥದಲ್ಲೆಯೇ ನಾವು ಕೌಟುಂಬಿಕ ರಾಜಕೀಯ, ಸಾಹಿತ್ಯಕ ರಾಜಕೀಯ ಇತ್ಯಾದಿಯಾಗಿ ಪ್ರಯೋಗ ಮಾಡುವುದುಂಟು. ಈ ರೀತಿಯ ರಾಜಕೀಯ ಪರಿಕಲ್ಪನೆಯ ವಿಶಾಲಾರ್ಥದಲ್ಲಿ ಒಪ್ಪಿಕೊಂಡರೆ ಎಲ್ಲಾ ಸಾಹಿತ್ಯ ಕೃತಿಗಳು ರಾಜಕೀಯ ಕೃತಿಗಳೇ ಆಗುತ್ತವೆ. ಏಕೆಂದರೆ ಮಾನವೀಯ ಸಂಬಂಧಗಳೆಲ್ಲವೂ ರಾಜ–ಪ್ರಜೆ, ಶಾಸಕ–ಶಾಸಿತ, ಮಾಲೀಕ–ಕಾರ್ಮಿಕ ಪುರುಷ–ಸ್ತ್ರಿ ಇತ್ಯಾದಿ) ಒಂದಲ್ಲ ಒಂದು ವಿಧದ ಅಧಿಕಾರ ಅಥವಾ ಸತ್ಯಯಾನ್ನಾಧರಿಸಿದವುಗಳೇ, ಆದರೆ ಇಂತಹ ವ್ಯಾಖ್ಯಾನವು ಸರಿಯೇ ಎನ್ನುವ ಪ್ರಶ್ನೆಗಳು ಸಹ ಉದ್ಭವಿಸುತ್ತವೆ.

ಮಾರ್ಕ್ಸಿಸ್ಟ್ *(Marxist)* ಚಿಂತಕರುಗಳಾದ ಡೇವಿಡ್ ಮೆಕಲನ್ ರಾಜಕೀಯವೆಂದರೆ "ಕೇವಲ ಸಂಸ್ಥೆಗಳ ಕಾರ್ಯ, ಅಧಿಕಾರವನ್ನು ಗಳುಸುವ ಹಾಗೂ ಅದನ್ನು ಉಳಿಸಿಕೊಳ್ಳುವ ಶಾಸನ ತಂತ್ರಗಳು ಇಷ್ಟೇ ಅಲ್ಲ. ಈ ರೀತಿಯ ರಾಜಕೀಯವನ್ನು ಸೀಮಿತಗೊಳಿಸಿ. ವೈಯಕ್ತಿಕ ಹಾಗೂ ಸಾಮಾಜಿಕ ಕ್ಷೇತ್ರಗಳನ್ನು ಬೇರ್ಪಡಿಸುವುದು ಅತ್ಯಂತ ಅಪಾಯಕಾರಿ"[5] ಈ ನೆಲೆಯಲ್ಲೆ *Political Theory-1971,* ಇದನ್ನು ಫೆಡ್ರಿಕ್ ಜೇಮಸನ್ ಇನ್ನೂ ಮುಂದೆ ಹೋಗಿ ಅಂತಿಮವಾಗಿ ಎಲ್ಲವೂ ರಾಜಕೀಯವೇ ಎಂಬ ನಿಲುವು ತಳೆಯುತ್ತಾನೆ.

ಹರೀಶ್ ತ್ರಿವೇದಿಯವರು ಅಧಿಕಾರವನ್ನು ಕುರಿತಾದ ಮಾನವ ಸಂಬಂಧದ ಚಿಂತನೆಗೆ ಹೆಚ್ಚು ಮಹತ್ವವನ್ನು ಕೊಟ್ಟರೆ, ಬೆಂಜಮಿನ್ ಡಿಸ್ರೇಲ್ ಅವರು ರಾಜಕೀಯ ವ್ಯವಸ್ಥೆಯನ್ನು ಕುರಿತಾದ ಗಂಭೀರ ಚಿಂತನೆಗೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಮಾರಿಷ್ ಇ ಸ್ಪಿಯರ್ ಭಾವನೆ ಮತ್ತು ವಿಚಾರಕ್ಕೆ ಮಹತ್ವ ನೀಡಿದ್ದಾರೆ. ಆರ್ವಿಂಗ್ ಹೋವ್ ರಾಜಕೀಯ ವಿಚಾರಗಳನ್ನೊಳಗೊಂಡ ರಾಜಕೀಯ ಘಟ್ಟದ ಘಟನೆಗಳನ್ನು ಒಳಗೊಂಡಿರಬೇಕು ಅನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಕೇಟ್‌ಮಿಲೆಟ್ ಅಧಿಕಾರ

ವ್ಯವಸ್ಥೆಯನ್ನಾಧರಿಸದ ಸಾರ್ವಜನಿಕ ಹಾಗೂ ವೈಯುಕ್ತಿಕ ಸಂಬಂಧಗಳೂ ಸಹ ರಾಜಕೀಯ ಸಂಬಂಧಗಳೇ ಇಂತಹ ವಿಶಾಲಾರ್ಥದಲ್ಲೆಯೇ ಕೌಟುಂಬಿಕ ರಾಜಕೀಯ ಮತ್ತು ಸಾಹಿತ್ಯಿಕ ರಾಜಕೀಯವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ರಾಜಕೀಯ ಶಬ್ದಾರ್ಥದ ವ್ಯಾಪ್ತಿಯನ್ನು ವಿಸ್ತರಿಸಿದ್ದಾಳೆ.

ಆರ್ವಿಂಗ್ ಹೋವ್ ಅವರ *'Political Novel'* ಎಂಬ ಗ್ರಂಥದಲ್ಲಿನ ಹೇಳಿಕೆಯ ಪ್ರಕಾರ 'ಭಾರತೀಯ ಬರಹಗಾರರು ರಾಜಕೀಯ ಪ್ರಧಾನ ವಿಚಾರಗಳನ್ನು ತಮ್ಮ ಕಾದಂಬರಿಗಳಲ್ಲಿ ತಂದಿದ್ದಾರೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬರಹಗಾರುರು ಸ್ವಾತಂತ್ರ್ಯ ಚಳುವಳಿಯ ರಾಜಕೀಯ ಹೋರಾಟವನ್ನು ಚಿತ್ರಿಸಿದ್ದಾರೆ ಮತ್ತು ಸ್ವಾತಂತ್ರ್ಯೋತ್ತರ ಕಾದಂಬರಿಗಳಲ್ಲಿ ರಾಜಕೀಯ ತತ್ವವನ್ನು ಅಭಿವ್ಯಕ್ತಿಸುವ ಪ್ರಯತ್ನ ಮಾಡಿದ್ದಾರೆ. ಮಾರಿಷ್ ಇ ಸ್ಪಿಯರ್ ಹೇಳುವ ರಾಜಕೀಯ ತತ್ವವು ಭಾವನೆ ಮತ್ತು ವಿಚಾರಗಳಿಗೆ ಪ್ರಾಧಾನ್ಯತೆಯನ್ನು ಕೊಡುವುದರೊಂದಿಗೆ ಒಂದು ತಾತ್ವಿಕವಾದ ರಾಜಕೀಯ ತತ್ವವನ್ನು ಕಟ್ಟಿಕೊಡುತ್ತಾರೆ. ಆರ್ವಿಂಗ್ ಹೋವ್ ಅವರ ವ್ಯಾಖ್ಯಾನದಂತೆ ರಾಜಕೀಯ ಕಾದಂಬರಿಯಲ್ಲಿ ಒಂದು ರಾಜಕೀಯ ಘಟ್ಟ *(Ephoch)* ಮುಖ್ಯವಾದರೆ ಕೇಟ್ ಮಿಲೆಟ್‌ಳ *'The Sexual Politics'*ನಲ್ಲಿ ರಾಜಕೀಯ ಸತ್ತೆಯನ್ನಾಧರಿಸಿದ ಒಂದು ಸಮೂಹವು ಇನ್ನೊಂದು ಸಮೂಹವನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗುವಂತಹ ವ್ಯವಸ್ಥೆಯನ್ನು ಕುರಿತು ಮಾತಾಡುತ್ತಾಳೆ.

ಸ್ವಾತಂತ್ರ್ಯ ಹೋರಾಟವು ರೂಪುಗೊಂಡಿದ್ದೇ ವಸಾಹತುಶಾಹಿಯ ವಿರುದ್ಧದ ಹೋರಾಟಕ್ಕಾಗಿ ಸ್ವಾತಂತ್ರ್ಯ ಹೋರಾಟವು ಹತ್ತೊಂಬತ್ತನೇ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೇ ಶತಮಾನದ ಪೂರ್ವದ ಕಾಲ ಘಟ್ಟದಲ್ಲಿ ನಡೆದ ರಾಜಕೀಯ ಹೋರಾಟವೆನ್ನುವುದು ಚಾರಿತ್ರಿಕ ಸತ್ಯ. ವಸಾಹತುಶಾಹಿಯ ಪ್ರಭುತ್ವವನ್ನು ಎದುರಿಸುವ ರಾಜಕೀಯ ತತ್ವ *(Political Ideology)*ವನ್ನು ನಿರೂಪಿದ ಕಾಲಘಟ್ಟ *(Ephoch)*ವಾಗಿದೆ.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ರಾಜಕೀಯ ಚುಟುವಟಿಕೆಗಳನ್ನು ಗಮನಿಸಿದಾಗ 'ಉತ್ಪಾದನಾ ಸಂಬಂಧಗಳಿಗೆ ಅನುಗುಣವಾಗಿ ವ್ಯಕ್ತಿಕೇಂದ್ರಿತಗೊಳ್ಳುವ ಸಾಮಾಜಿಕ ಸಂಬಂಧವನ್ನು ನೋಡುತ್ತೇವೆ. ಈ ಅರ್ಥದಲ್ಲಿಯೇ ರಾಜಕಾರಣವು ಸಾಮಾಜಿಕ ಸಂಬಂಧಕ್ಕೆ ಅನುಸಾರವಾಗಿ ರೂಪುಗೊಳ್ಳುವುದರಿಂದ ಅದಕ್ಕೊಂದು ಚಲನಶೀಲವಾದ ಗುಣವಿರುತ್ತದೆ. ಈ ರಾಜಕಾರಣದ ಸಂಚಲನೆಯನೆಯ ಗುಣವು ಉತ್ಪಾದನಾ ಸಂಬಂಧಗಳಿಗೆ ಅನುಗುಣವಾಗಿ ರೂಪುಗೊಳ್ಳುತ್ತದೆ'[6] ಎಂದು ಗ್ರಾಮ್‌ಶಿ *(Gramci)* ಮಾತಾಡುತ್ತಾನೆ.

ಆಧುನಿಕ ಭಾರತೀಯ ಚರಿತ್ರೆಯು ಈ ರೀತಿಯ ಪರಿವರ್ತನೆಯ ಮೂಲಕ ಆಂತರಿಕ ಸಂಘರ್ಷ ಏರ್ಪಟ್ಟಿರುವುದರಿಂದಲೇ ರಾಜಕೀಯ ವ್ಯಾಖ್ಯಾನಗಳು ವಿವಿಧ ರೂಪಗಳನ್ನು ಪಡೆದುಕೊಂಡಿವೆ. ಈ ರೀತಿಯ ರಾಚನಿಕ ಮಾದರಿಗಳನ್ನು ಬದಲಾಯಿಸಲು ಸ್ವಾತಂತ್ರ್ಯ ಹೋರಾಟದ ನಾಯಕರುಗಳು ಪಶ್ಚಿಮದ ಕಣ್ಣಿಂದ ಭಾರತೀಯತೆಯನ್ನು ನೋಡುವ ಮತ್ತು ಇಲ್ಲಿಯ ಅನಿಷ್ಠಗಳನ್ನು ತೊಡೆಯಲು ಪಶ್ಚಿಮದ ಅಲೋಚನೆಯಲ್ಲೇ ಪ್ರಯತ್ನಸಿದ ರಾಜ್‌ರಾಮ್ ಮೋಹನ್ ರಾಯ್ ಅವರ ಆಲೋಚನಾ ಕ್ರಮದಲ್ಲಿ ಪಶ್ಚಿಮದ ದಟ್ಟ ಚಿಂತನೆಗಳು ಮೇಳೈಸಿಕೊಂಡಿವೆ. ಎಂದು ಆಶೀಶ್ ನಂದಿಯವರು ಹೇಳುತ್ತಾರೆ ವಿವರಣೆಗೆ

ನೋಡಿ. *(Ashish Nandy: 'The Intimate Enemy', Oxford University Press-1983)* ಇನ್ನೊಂದು ಮಾದರಿಯಾದ ಗಾಂಧೀವಾದವು ಭಾರತೀಯ ನೆಲೆಯಲ್ಲಿ ಬೇರುಬಿಟ್ಟ (ಅಸ್ಪೃಶ್ಯತೆ, ಸ್ತ್ರೀ ಶೋಷಣೆ., ಪಾನ ನಿರೋಧ, ಸಮಾನತೆ ಇಲ್ಲದ ಸಮಾಜ, ಅರಾಜಕತೆಯಿಂದ ಕೂಡಿದ ವ್ಯವಸ್ಥೆ, ಹಿಂಸಾಚಾರದಿಂದ ಕೂಡಿದ ಅಮಾನವೀಯ  ಮೌಲ್ಯಗಳನ್ನು ನಿರಾಕರಿಸುವ ದೇಶಿಯ ಕಾಳಜಿ ಕೂಡ ಪಶ್ವಿಯದ ವಿಚಾರಧಾರೆ ಮತ್ತು ಪ್ರಭಾವಗಳಿಂದ ಹುಟ್ಟಿಕೊಂಡಿದ್ದಾಗಿದೆ). ಅನಿಷ್ಟಗಳನ್ನು ಉದಾರವಾದಿ ನೆಲೆಯಲ್ಲೇ ದಮನ ಮಾಡುವ ರಾಜಕೀಯ ಪರಿಭಾಷೆಯಾಗಿ ರೂಪುಗೊಂಡಿದೆ. ಈ ಮಾದರಿಯ ಮೂಲ ದ್ರವ್ಯವನ್ನು ಗಾಂಧಿಯಲ್ಲಿ ಕಾಣಲೂ ಸಾಧ್ಯವೆಂದು ರಾಜಕೀಯ ಸಂಕಲ್ಪಶಕ್ತಿಯು ಆವರಲ್ಲಿ ಬೇರೂರಿತ್ತೆಂದು ಆಶೀಶ್ ನಂದಿ ಹೇಳುತ್ತಾರೆ.

"ಗಾಂಧೀಯ ಆಲೋಚನಾಕ್ರಮಗಳು ಪಶ್ಚಿಮದ ಕಡೆ ಮುಖ ಮಾಡಿ ನಿಂತವುಗಳಲ್ಲ. ಗಾಂಧೀಯ ಆಲೋಚನ ಕ್ರಮವು ಹೆಚ್ಚು.ದೇಶಿಯ ಒಳ ಸಂಸ್ಕೃತಿಯ ಮೌಲ್ಯವನು ಒಳಗೊಂಡಿರುವಂತಹದು."[7] ರಾಜಕೀಯ ಪರಿಭಾಷೆ ಭಾರತೀಯ ಸಾಮಾಜಿಕ ರಚನಾ ಕ್ರಮದಿಂದಲೂ ಪ್ರೇರಿತವಾದುದು.ಈ ರಾಜಕೀಯ ಆಲೋಚನಾ ರೂಪವು ಮತ್ತು ಅದರ ಅಳವಡಿಕೆಯು ಮುಖ್ಯವೆಂದು ಭಾವಿಸಿಕೊಂಡ ಚಿಂತಕರು ಈ ರಾಜಕೀಯ ಪರಿಭಾಷೆಯನ್ನು ರೂಢಿಸಿಕೊಳ್ಳಲು ಯತ್ನಿಸಿದರು. ಇದನ್ನು ಪೆಮಿನಿಸ್ಟ್ *(Feminist)*ರು ವ್ಯಕ್ತಿಗತವಾದ ಸಂಬಂಧಗಳ ಬಲದ ನಿರ್ವಚನವು ಆಗುತ್ತದೆ ಎಂದು ಭಾವಿಸುತ್ತಾರೆ. ಈ ಚಿಂತನಾ ಕ್ರಮವೇ ಬೇರೆಯಾಗುತ್ತದೆ.ವಸಾಹತುಶಾಹಿ ಅನುಭವದ ಜೊತೆಗೆ ಬಂದ ಅಧಿಕಾರಶಾಹಿ ವರ್ಗವು ಈ ರೀತಿಯ ಪರಿಭಾಷೆಯನ್ನು ನಂಬಿಕೊಂಡಿರುತ್ತದೆ. ಸಾಹಿತ್ಯಿಕ ವಲಯದಲ್ಲಿ ಈ ಪರಿಭಾಷೆಯ ಮೂಲಕ ಚಾರಿತ್ರಿಕ ಮೌಲ್ಯಗಳನ್ನು ಸೃಜನಾತ್ಮಕ ಕಲೆಯೊಂದಿಗೆ ಅಭಿವ್ಯಕ್ತಿಸಲು ಒಂದು ತಾತ್ವಿಕ ಗ್ರಹಿಕೆಯಾಗಿಯೂ ಬಳಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ರಾಜಕೀಯ ಪ್ರಜ್ಞೆಯ ಸ್ವರೂಪವು ಹಲವು ಚಿಂತಕರ, ಚುಳುವಳಿ ಸಂಘಟನೆಗಳ ಮೂಲಕ ರೂಪುಗೊಂಡಿರುವಂತಹುದು.

ಕನ್ನಡ ಸಾಹಿತ್ಯದಲ್ಲಿನ ಕಾದಂಬರಿಗಳು ನಮ್ಮ ಕನ್ನಡ ಸಾಂಸ್ಕೃತಿಕ ಪ್ರೇರಣೆಗಿಂತ ಹೆಚ್ಚು ಪಾಶ್ವಾತ್ಯ ಕಾದಂಬರಿ ಸಾಹಿತ್ಯದಿಂದ ಪಡೆದ ಸ್ಫೂರ್ತಿ ಅಗಾಧವಾದುದು "ಕನ್ನಡ ಸಾಹಿತ್ಯ..., ನೂತನ ರೂಪರೇಖೆಗಳನ್ನು ತಳೆಯಲು ನೂತನ ಪಥಗಳಲ್ಲಿ ಸಾಹಸ ಯಾತ್ರೆಯನ್ನು ಕೈಗೊಳ್ಳಲು ಪಾಶ್ವಾತ್ಯವೇ ಪ್ರಮುಖವಾದ ಪ್ರೇರಕ ಶಕ್ತಿಯಾಗಿದೆ."[8] ಜಗತ್ತಿನ ಯಾವುದೇ ಸಾಂಸ್ಕೃತಿಕ ಸಾಮಾಜಿಕ ಬದಲಾವಣೆಯು ಏರಿಳಿತಗಳು, ಒಳಗಿನ ಆಳದಲ್ಲಿ ರಾಜಕೀಯ ಆಶಯದಿಂದಲೇ ನಿಯಂತ್ರಿತವಾಗಿರುತ್ತವೆಂಬುದನ್ನು ಇತಿಹಾಸವು ತೋರಿಸಿಕೊಟ್ಟಿದೆ. ನಮ್ಮನ್ನು "ಪಾಶ್ಚಾತ್ಯರು ಒಂದುವರೆ ಶತಮಾನಗಳ ಕಾಲ ರಾಜಕೀಯಾವಾಗಿ ಆರ್ಥಿವಾಗಿ ಸಾಂಸ್ಕೃತಿಕವಾಗಿ ಹಿಡಿತದಲ್ಲಿ ಇಟ್ಟುಕೊಂಡಿದ್ದರ ಫಲವೇ ರಾಜಕೀಯ ಪ್ರಜ್ಞೆ ಜಾಗೃತವಾಯಿತು. ನಾವು ಬದುಕುತ್ತಿರುವ ಸಮಾಜ ರಚನೆಯ ಸೂಕ್ಷ್ಮಗಳು ವೈಷಮ್ಯಗಳನ್ನು ವೈಜ್ಞಾನಿಕವಾಗಿ ಗ್ರಹಿಸಿ ಅದರ ಬದಲಾವಣೆಯ ಸಾಧ್ಯತೆಗಳ ಕಡೆಗೆ ಯೋಚಿಸುವುದೇ ರಾಜಕೀಯ ಪ್ರಜ್ಞೆ"[8] ಟಿ.ಎಸ್ ಏಲಿಯಟ್ ಹೇಳುವಂತೆ ಈ ರಾಜಕೀಯ ಪ್ರಜ್ಞೆಯ ಜೋತೆಗೆ ಸಮಕಾಲೀನ ಪ್ರಜ್ಞೆಯೂ ಇರುತ್ತದೆ.

"ಪ್ರಜ್ಞೆ"[9] ಯನ್ನು "ಅರಿವಿನ ಪ್ರಾಥಮಿಕ ಹಂತವನ್ನು ದಾಟಿ ಮತ್ತು ಆಳವಾದ ಸಂವೇದನೆಯ ಸ್ಥಿತಿಯೇ ಪ್ರಜ್ಞೆ"[10] ಎಂದು ಬಾವಿಸಿ. ಹೀಗೆ ಗ್ರಹಿಸಬಹುದು. ಪ್ರಜ್ಞೆಯ ಬಗ್ಗೆ ಹಲವು ಚಿಂತಕರ

ವ್ಯಾಖ್ಯಾನಗಳನ್ನು ಗಮನಿಸಬಹುದು. ಅರಿವಿನ ಸಂವೇದಾನಾ ರೂಪವನ್ನು ಪ್ರಜ್ಞೆ ಎನ್ನಬಹುದಲ್ಲವೇ "ಸುಸಂಸ್ಕೃತವಾದ ಚೈತ್ಯನ ಮಾತ್ರ ತನ್ನ ಅತ್ಯುನ್ನತ ಸ್ಥಿತಿಯಲ್ಲಿ ಪ್ರಜ್ಞೆಯನ್ನು ಪಡೆಯಬಲ್ಲದು."[11] ಎಂದು ಪು.ತಿ.ನ ಹೇಳತ್ತಾರೆ. "ಅನುಭವವನ್ನು ಗ್ರಹಿಸುವಂಥದೇ ಪ್ರೇಜ್ಞೆ, ನಿಜವಾದ ಪ್ರಜ್ಞೆ ಎನ್ನುವುದು ಅಖಂಡ ಮತ್ತು ಏಕೈಕ ಆದರೆ ಅನುಭವದ ಮುಖ್ಯ ಘಟಕಗಳನ್ನು ಗ್ರಹಿಸುವ ಅದರ ಮೂರು ಸ್ತರಗಳನ್ನು ನಾವು ಪ್ರತ್ಯೇಕವಾಗಿ ಗುರುತಿಸಿ ವ್ಯಕ್ತಿ ಪ್ರಜ್ಞೆ ಪರಿಸರ ಪ್ರಜ್ಞೆ ಕಾಲ ಪಜ್ಞೆ ಎನ್ನಹುದು"[12] ಎನ್ನುವ ಕೆ.ವಿ ಸುಬ್ಬಣ್ಣನವರು ಇಂಗ್ಲಿಷ್‌ನಲ್ಲಿ ಪ್ರಜ್ಞೆಗೆ ಸಂವಾದಿಯಾದ ಪದ*(Consciousness)* ಇದನ್ನು ಸಿಗ್ಮಂಡ್ ಪ್ರಾಯ್ಡ್ ಎರಡು ರೀತಿ ಹೇಳುತ್ತಾನೆ. ಪ್ರಜ್ಞೆ ಅಥವಾ ಸುಪ್ತಪ್ರಜ್ಞೆ ಮತ್ತು ಪೂರ್ವ ಪ್ರಜ್ಞೆ, ವಿಲಯಂ ಜೇಮ್ಸ್‌ನ ಪ್ರಕಾರ ಪ್ರಜ್ಞೆಗೆ ಪ್ರವಾಹದ ಸ್ವರೂಪವಿದೆ. *"Consciousness is nothing joined it flows, a river, or a stream are the metaphors by which it is most naturally described:."*[13]

*"Man's consciousness (with its ego, its sublimations its distortions and its vivid complexity ) is nothing but the adaption produced in man's psychi genotype by the conditions of working in association with other men towards the ealisation of freedom… consciousness .., in the broadest sense is a social product."*[14]

ಮಾರ್ಕ್ಸ್ ೯ವಾದಿ ವಿಮರ್ಶಕ ಕ್ರಿಸ್ಟಾಫರ್ ಕಾಡ್ವೆಲ್ಲನ ಪ್ರಕಾರ 'ಪ್ರಜ್ಞೆಯು ಒಂದು ಸಾಮಾಜಿಕ ಉತ್ಪನ್ನ ಸಹ ಜೀವಿಗಳೊಡನೆ ಮಾನವನು ಕೆಲಸ ಮಾಡುತ್ತಾ ತನ್ನ ಸ್ವಾತಂತ್ರ್ಯದ ಸಾಧನೆಯಲ್ಲಿ ಮಾನಸಿಕ ವ್ಯವಸ್ಥೆಯಲ್ಲಿ ಪಡೆಯುವ ಸಿದ್ದಿಯನ್ನು ಪ್ರಜ್ಞೆ' ಎಂದು ಗ್ರಹಿಸುತ್ತಾನೆ. ಹಾಗೇಯೇ. *"Thought man is a unique individual…, he equally the whole, the ideal whole the subjective existence of society as thought and experience."*[15] ಈ ರೀತಿಯ ಪ್ರಜ್ಞೆಯನ್ನು ತಳಮಟ್ಟದ ಶೋಧನೆಗೆ ತೋಡಗಿಸಿದರೆ ಮಾತ್ರ ಪ್ರಜ್ಞೆಯ ಸ್ವರೂಪ ಕಾಣುವುದು ಪ್ರಜ್ಞೆಯನ್ನು ಒಂದು ಪರಿಭಾಷೆಯಾಗಿಯೂ ಗ್ರಹಿಸಿಕೊಳ್ಳಬಹುದು "ಈ ಪರಿಭಾಷೆಯು ನವ್ಯೋತ್ತರ ಸಾಹಿತ್ಯದಲ್ಲಿ ಹೆಚ್ಚು ಬಳಕೆಯಾಗುವಂತಹದು."[16]

ರಾಜಕೀಯ ಪ್ರಜ್ಞೆಯು ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತುಶಾಹಿಯ ಪ್ರಭುತ್ವದ ಹಿನ್ನೆಲೆಯಲ್ಲಿ ರೂಪುಗೊಂಡಿದೆ. ಸ್ವಾತಂತ್ರ್ಯೋತ್ತರ ನಿರ್ವಸಾಹತುಶಾಹಿಯ ಹಂತದವರೆಗೆ ತನ್ನ ಬೇರುಗಳನ್ನು ಬಿಟ್ಟಿಕೊಂಡಿದೆ. ಕನ್ನಡ ಸಾಹಿತ್ಯವೂ ಹಲವು ಚಳುವಳಿಗಳ ಮೂಲಕ ಚಾರಿತ್ರಿಕ, ಸಾಂಸ್ಕೃತಿಕ ಹಿನ್ನಲೆಯಲ್ಲಿ ರೂಪುಗೊಂಡಿದೆ. ಗಾಂಧೀವಾದವನ್ನು ರಾಜಕೀಯ ಪರಿಭಾಷೆಯಾಗಿ ಗ್ರಹಿಸಿದರೆ, ಮಾರ್ಕ್ಸ್‌ವಾದ ಲೋಹಿಯವಾದ ಮತ್ತು ಅಂಬೇಡ್ಕರ್ ವಾದಗಳೂ ಸೈದ್ಧಾಂತಿಕ ಚೌಕಟ್ಟಿನಲ್ಲಿ ಗಾಂಧೀವಾದಕ್ಕೆ ಪ್ರತಿಕ್ರಿಯಿಸುತ್ತವೆ.

ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನು ರಾಜಕೀಯ ಪ್ರಜ್ಞೆಯ ಮೂಲಕ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಬರಹಗಾರರು ಹೇಗೆ ಕಾದಂಬರಿಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ ಅನ್ನುವುದನ್ನು ಗುರುತಿಸಹಬಹುದು.

ಗಾಂಧೀವಾದವೂ ಎಲ್ಲಾ ಬರಹಗಾರರಿಗೆ ಒಂದು ಸುಧಾಣಾವಾದಿ ಸಿದ್ದಾಂತವಾಗಿ; ಆದರ್ಶೀಕೃತ ಮೌಲ್ಯವಾಗಿ ಮತ್ತು ಇದು ಪರವಾಗಿ ಮತ್ತು ಪ್ರತಿಕ್ರಿಯೆಯ ಮೂಲಕ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ.

ಗಾಂಧೀವಾದದ ಹಿನ್ನೆಲೆಯಲ್ಲಿ ರಾಜಕೀಯ ಕಾದಂಬರಿಯಲ್ಲಿ ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಧೋರಣೆಗಳು ಹೇಗೆ ಸೈದ್ಧಾಂತಿಕತೆಯ ಮೂಲಕ ಅಭಿವ್ಯಕ್ತಿಗೊಂಡಿವೆ ಅನ್ನುವುದನ್ನು ಗಮನಿಸುವ ಪ್ರಯತ್ನ ಮಾಡಲಾಗಿದೆ. ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದಲ್ಲಿ ಆದರ್ಶವಾದ ಗಾಂಧಿವಾದವು ಹೇಗೆ ಚಾರಿತ್ರಿಕ ಮಹತ್ವ ಪಡೆದು ಕೊಂಡಿತು ಅನ್ನುವ ಹಿನ್ನೆಲೆಯಲ್ಲಿ ರಾಜಕೀಯ ತತ್ವದ ಮೂಲಕ ಹೇಗೆ ಒಂದು ಪರಿಭಾಷೆಯಾಗಿ ಬಳಸಿಕೊಳ್ಳಲಾಗಿದೆ ಅನ್ನುವುದನ್ನು ದೇಶಿವಾದದ ಹಿನ್ನೆಲೆಯಲ್ಲಿ ಗ್ರಹಿಸುವ ಪ್ರಯತ್ನ ಮಾಡಲಾಗಿದೆ.

**ಪರಾಮರ್ಶನ ಗ್ರಂಥಗಳು**


1. ನಾಗಭೂಷಣ.ಡಿ.ಎಸ್. (1990). ಸಾಹಿತ್ಯ ಮತ್ತು ರಾಜಕಾರಣ. ಸಂವಾದ ಪ್ರಕಾಶನ, ಮಾಲ್ಲಡಿಹಳ್ಳಿ. ಪು.ಸಂ.57.
2. Harish Trivedi. (1984). Defining the political novel' the American political novel. Health publication Pvt.ltd. New Delhi. p-4.
3. Ketmilte. (1970).Sexual Politics. Vikas Publishing, Delhi. p-16.
4. Devid Maclan. (1971). Political Theory. Penguin Books Hammondsworth, U K. p-45.
5. Mourice A Finoechlro,(1988). Gramci and the history of Dialectical thought.Cambridge University press. P-42.
6. Ashis nandy. (1983). Intimate Enemy. Oxford University Press.
7. ಶಿವರುದ್ರಪ್ಪ ಜಿ.ಎಸ್. (1990). ಕನ್ನಡ ಕಾದಂಬರಿಗಳ ಬೆಳವಣಿಗೆ. ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು. ಪುಟ.18
8. ರಹಮತ್ ತರೀಕೆರೆ. (ವರ್ಷ). ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆಯ ಸ್ವರೂಪ. ಮೈಸೂರು ವಿ.ವಿ. ಪ್ರಸಾರಂಗ. ಮೈಸೂರು. ಪುಟ.50.
9. ಅಡಿಟಿಪ್ಪಣಿ: ಪ್ರಜ್ಞೆಗೆ ಎಚ್ಚರಿಕೆ, ವಿಶೇಷವಾದ ತಿಳುವಳಿಕೆ ಎಂಬ ಅರ್ಥವುಂಟು. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಪ್ರಜ್ಞೆಯನ್ನು ಪ್ರತಿಭೆಗೆ ಸಂವಾದಿಯಾಗಿ ಬಳಸುತ್ತಾರೆ. ಪ್ರಜ್ಞೆಯನ್ನು ಅರಿಯುವ ಶಕ್ತಿ ಎಂದೂ ಸಹ ಗ್ರಹಿಸುತ್ತಾರೆ.
10. ಶಿವರುದ್ರಪ್ಪ ಜಿ.ಎಸ್. (1982). ಸಮಕಾಲೀನ ಪ್ರಜ್ಞೆ ಹಿನ್ನೆಲೆ. ಬೆಂಗಳೂರು ವಿ.ವಿ. ಪ್ರಕಾಶನ. ಬೆಂಗಳೂರು. ಪುಟ.87.
11. ಪ್ರಭುಶಂಕರ್. (1977). ಅಂಗುಲಿಮಾಲಾ ನಾಟಕದ ಮುನ್ನುಡಿ. ಮೈಸೂರು ವಿ.ವಿ. ಪ್ರಸಾರಂಗ. ಮೈಸೂರು.

12. ಸುಬ್ಬಣ್ಣ. ಕೆ. ವಿ. (1975). ಸ್ವಾತಂತ್ರ್ಯಪೂರ್ವ ಹೊಸಗನ್ನಡ ಸಾಹಿತ್ಯ–ಬಿಡುಗಡೆಬಳ್ಳಿ, ಮೈಸೂರು ವಿ.ವಿ. ಪ್ರಸಾರಂಗ. ಮೈಸೂರು. ಪುಟ:327.
13. Jemes William. (1977). Field of Consciousness-Modern Tradition. Oxford university press. London. p-71.
14. Chritopher, Caud well., (1975). Illusion and Reality. Orient Longman, New Delhi. p-168.
15. Marks Qtd. By R William. (1986). Marxcism and Literature. Verso 15 greek strett, Landon. p-19.
16. ಅಡಿಟಿಪ್ಪಣಿ: ಪ್ರಜ್ಞೆಗೆ ಸಾಕ್ಷಿಪ್ರಜ್ಞೆ, ಬ್ರಾಹ್ಮಣ ಪ್ರಜ್ಞೆ, ದಲಿತ–ಶೂದ್ರ ಪ್ರಜ್ಞೆ, ರಾಜಕೀಯ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ, ಪರಿಸರ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ಚಾರಿತ್ರಿಕ ಪ್ರಜ್ಞೆ, ಮೊದಲಾದ ಪ್ರಜ್ಞೆಯ ಅನೇಕ ರೂಪಗಳನ್ನು ನೋಡಬಹುದು.